# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ-181 ಹೊಸಕೆರೆಹಳ್ಳಿ, ಬೆಂಗಳೂರು

---

ಸಂ: ಸ.ಅ/ವಾ-161/ಪಿ.ಆರ್/ /2021-22 ದಿನಾಂಕ : 15-05-2021

## ವಾರ್ಡ್ ಸಮಿತಿ (WDC) ವಾರ್ಡ್ ಸಂಖ್ಯೆ-161 ಹೊಸಕೆರೆಹಳ್ಳಿ ವಾರ್ಡ್‌ನ ದಿನಾಂಕ :15-05-2021 ರಂದು ನಡೆದ ಸಭೆಯ ನಡವಳಿಗಳು

**ವಿಷಯ:-** ವಾರ್ಡ್ ಸಂಖ್ಯೆ-161 ಹೊಸಕೆರೆಹಳ್ಳೀ ವಾರ್ಡ್ DETER ಸಮಿತಿ (WDC)ಸಭೆಯ ನಡವಳಿ.

**ಉಲ್ಲೇಖ:-**1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ :ನಂ RD 158 TNR 2020 ದಿನಾಂಕ :07-05-2021

******

ಉಲ್ಲೇಖ (1) ರ ಸಭಾ ಸೂಚನಾ ಪತ್ರದ ಅನುಸಾರ ಆದೇಶದ ಅಂಶಗಳನ್ನು ಪಾಲಿಸಲು ವಾರ್ಡ್ ಕಮಿಟಿ ಸಭೆ ನಿಗಧಿಪಡಿಸಿ ದಿನಾಂಕ :15-05-2021 ರಂದು ವಾರ್ಡ್ ಕಛೇರಿಯಲ್ಲಿ ಬೆಳಿಗ್ಗೆ 11.00 ಗಂಟೆಗೆ ಶ್ರೀ ಧರಣೇಂದ್ರಕುಮಾರ್, ನೋಡೆಲ್ ಅಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ ಹಾಗೂ ಶ್ರೀ ವೆಂಕಟಮಲವಯ್ಯ.ಕೆ ಸದಸ್ಯ ಕಾರ್ಯದರ್ಶಿ ರವರ ಕಾರ್ಯಾದ್ಯಕ್ಷತೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು.

ಸಭೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರು ಹಾಜರಿರುತ್ತಾರೆ.

ಶ್ರೀ ಧರಣೇಂದ್ರಕುಮಾರ್, ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ-161 ರಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ನ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ಮಟ್ಟದಲ್ಲಿ ಕೋವಿಡ್-19 ಅನ್ನು ನಿಯಂತ್ರಿಸಲು ಸರ್ಕಾರದ ಆದೇಶದಂತೆ DETER ಸಮಿತಿ (WDC) ರಚಿಸಲಾಗಿದ್ದು, ವಾರ್ಡ್ ಮಟ್ಟದಲ್ಲಿ ಕೋವಿಡ್ ನಿಯಂತ್ರಿಸಲು ವಾರ್ಡ್ ಕೋವಿಡ್ ಸ್ವಯಂ ಸೇವಕನ್ನಾಗಿ ನೇಮಿಸಿಕೊಳ್ಳಲು ಸೂಚಿಸಿರುತ್ತಾರೆ ಹಾಗೂ ಹೊಸಕೆರೆಹಳ್ಳಿಯಲ್ಲಿ ಹೊಸದಾಗಿ ನಿರ್ಮಿಸಿರುವ ಆಸ್ಪತ್ರೆಯಲ್ಲಿ ಆಮ್ಲಜನಕ ಸಹಿತ ಇರುವ 40 ಹಾಸಿಗೆಯುಳ್ಳ ಟ್ರಿಯಾಜ್ ಸೆಂಟರ್ ಹಾಗೂ ಕೋವಿಡ್ ಸ್ಥಿರೀಕರಣ ಘಟಕವನ್ನು ಮಾನ್ಯ ಕಂದಾಯ ಸಚಿವರು ಹಾಗೂ ಕ್ಷೇತ್ರದ ಶಾಸಕರವರು ಉದ್ಘಾಟನೆ ಮಾಡಿ ಸ್ಥಳೀಯ ನಿವಾಸಿಗಳು ಅನುಕೂಲ ಮಾಡಿಕೊಟ್ಟಿರುವ ಬಗ್ಗೆ ನೋಡೆಲ್ ಅಧಿಕಾರಿಯವರು ವಾರ್ಡ್ ಸಮತಿ ಸಭೆಯಲ್ಲಿ ಪ್ರಶಂಸೆಯನ್ನು ವ್ಯಕ್ತಪಡಿಸಿರುತ್ತಾರೆ.

ವಾರ್ಡ್‌ನ ಅಂಗನವಾಡಿ ಕೇಂದ್ರದಲ್ಲಿ ಲಸಿಕೆಯನ್ನು ನೀಡಲಾಗುತ್ತಿದ್ದು, ಅರ್ಹರ ಸಾರ್ವಜನಿಕರು ಲಸಿಕೆ ಪಡೆಯುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಕೋವಿಡ್-19 3ನೇ ಅಲೆಯು ಹರಡಬಹುದೆಂಬ ತಜ್ಞರ ಸಲಹೆಯಂತೆ ಮುಂಜಾಗ್ರತಾ ಕ್ರಮ ವಹಿಸಲು ಈಗಾಗಲೇ ವಾರ್ಡ್‌ನಲ್ಲಿ ನಿರ್ಮಿಸಲಾಗುತ್ತಿರುವ ಸಮುದಾಯ ಭವನವನ್ನು ಮಕ್ಕಳ ಕೋವಿಡ್ ಸ್ಥಿರೀಕರಣ ಕೇಂದ್ರವಾಗಿ (ಆಮ್ಲಜನಕ ಸಹಿತ) ಮಾರ್ಪಾಡು ಮಾಡುವ ಬಗ್ಗೆ ಚರ್ಚೆ ಕಾರ್ಯ ರೂಪಕ್ಕೆ ತರಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದ್ದು, ಸದರಿ ಕಾಮಗಾರಿಯು ಪ್ರಗತಿಯಲ್ಲಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು ಪದ್ಮನಾಭನಗರ ಉಪ ವಿಭಾಗರವರು ವಾರ್ಡ್ ಸಮಿತಿ ಸಭೆಗೆ ವಿವರಿಸಿರುತ್ತಾರೆ ಮತ್ತು ತುರ್ತಾಗಿ ಬೋರೆವೆಲ್ ಒಂದನ್ನು ಅಳವಡಿಸಿಕೊಡುವಂತೆ ನೋಡೆಲ್ ಅಧಿಕಾರಿಯವರು ಸೂಚಿರುವ ಮೇರೆಗೆ ಇನ್ನು ಒಂದು ದಿನದೊಳಗೆ ಬೋರೆವೆಲ್ ಅಳವಡಿಸಿವುದಾಗಿ ಸಭೆಗೆ ತಿಳಿಸಿದರು. ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸದಸ್ಯರಿಗೂ ಹಗೂ ಅಧಿಕಾರಿಗಳಿಗೂ ವಂದನೆಯನ್ನು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ಸಂಚಾಲಕರು

ವಾರ್ಡ್ 161 ರ ನೋಡಲ್ ಅಧಿಕಾರಿ.